೨ ಹೌದು

೩ ಈ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಂಡಿದೆ. ಸಂಬಂಧಿಸಿದ ಒತ್ತುವರಿದಾರರಿಗೆ ದಿನಾಂಕ ೩೧.೩.೧೯೯೯ರಂದು ನೋಟೀಸ್ ಕೊಟ್ಟಿರುವುದು ನಿಜ ಇದೆ. ಹಾಗೂ ಸದರಿ ಪುಟ್ಟಸಪುರದ ಗ್ರಾಮದ ಸ. ನಂ. ೬, ೭ ರ ಪಿತ್ತು ೯ರ ಕಾಲುದಾರಿಯನ್ನು ಒತ್ತುವರಿ ಮಾಡಿರುವುದನ್ನು ದಿನಾಂಕ ೮.೯.೯೯ರಂದು ಒತ್ತುವರಿದಾರರಿಂದ ಖಿಲ್ಲ ಮಾಡಿಸಿ ಜನ, ಜಾನುವಾರುಗಳು ತಿರುಗಾಡಲು ವ್ಯವಸ್ಥೆ ಮಾಡಲಾಗಿದೆ.

ಗುಲ್ಬರ್ಗಾ ಜಿಲ್ಲೆಯ ಶಹಾಪುರ ತಾಲ್ಲೂಕಿನ ಗೋಗಿ ಗ್ರಾಮದ ನೇಕಾರರಿಗೆ ವಸತಿ ಸೌಲಭ್ಯ

೧೬೨. ಶ್ರೀ ಶಿವಶೇಖರಗೌಡ ಶಿರವಾಳ, (ಶಹಾಪುರ).—ಮಾನ್ಯ ಬಂದರು ಮತ್ತು ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರಕಾರದವರು ಗುಲ್ಬರ್ಗಾ ಜಿಲ್ಲೆಯ ಶಹಾಪುರ ತಾಲ್ಲೂಕಿನ ಗೋಗಿ ಗ್ರಾಮದ ನೇಕಾರರಿಗೆ ವಸತಿ ಸೌಲಭ್ಯ ಒದಗಿಸಲು ಜಮೀನನ್ನು ವಶಪಡಿಸಿಕೊಂಡಿದ್ದಾರೆಯೇ ?

ಆ) ಹಾಗಿದ್ದಲ್ಲಿ ಸದರಿ ಜಮೀನಿನ ಮಾಲೀಕರಿಗೆ ಹಣ ನೀಡಲಾಗಿದೆಯೇ ?

ಇ) ಡಚ್ ಯೋಜನೆಯ ಮೂಲಕ ನೇಕಾರರಿಗೆ ಸದರಿ ಗ್ರಾಮದಲ್ಲಿ ಮನೆಗಳನ್ನು ನಿರ್ಮಿಸುವ ಯೋಜನೆ ಬಹಳ ಕಾಲದಿಂದಲೂ ಕಾರ್ಯಗತವಾಗದಿರುವುದಕ್ಕೆ ಕಾರಣಗಳೇನು?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು ಮತ್ತು ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಡಚ್ ಯೋಜನೆಯ ೨ನೇ ಹಂತದ ಬಗ್ಗೆ ಇನ್ನೂ ಅಂತಿಮವಾಗಿ ತೀರ್ಮಾನ ತೆಗೆದುಕೊಂಡಿರುವುದಿಲ್ಲ.

ಸರಕಾರಿ ನೌಕರರ ನಿವೃತ್ತಿ ವಯಸ್ಸನ್ನು ಇಳಿಸುವ

೧೬೩. ಶ್ರೀ ಸುಮಾ ವಸಂತ (ವೀರಾಜಪೇಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ ರಿಂದ ೫೬ಕ್ಕೆ ಇಳಿಸಲು ಸರ್ಕಾರವು ಯೋಚಿಸುತ್ತಿದೆಯೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಸರ್ಕಾರಿ ನೌಕರರ ಸೇವಾ ನಿವೃತ್ತಿ ವಯಸ್ಸನ್ನು ಈಗಿನ ೫೮ ವರ್ಷಗಳಿಂದ ೫೫ ವರ್ಷಗಳಿಗೆ ಇಳಿಸಬೇಕೆಂದು ಕೋರಿ ಅನೇಕ ಮನವಿಗಳು ಬರುತ್ತಿವೆ. ಈ ಕೋರಿಕೆಗಳು ವಿಶೇಷವಾಗಿ ಬಹುಪಾಲು ಸುಶಿಕ್ಷಿತ ನಿರುದ್ಯೋಗಿ ಯುವಜನರಿಂದ ಬಂದಂಥವುಗಳಾಗಿವೆ. ಸರ್ಕಾರವು ಈ ವಿಷಯವನ್ನು ಎಲ್ಲಾ ದೃಷ್ಟಿಕೋನಗಳಿಂದ ಎಚ್ಚರಿಕೆಯಿಂದ ಪರ್ಯಾಲೋಚಿಸಬಯಸುತ್ತದೆ.

ಮೈಕೋ ಗೃಹ ನಿರ್ಮಾಣ ಸಂಘಕ್ಕಾಗಿ ಭೂಸ್ವಾಧೀನ ಬಗ್ಗೆ

೧೬೪. ಶ್ರೀ ಬಿ. ರಾಮನಾಥ್ ರೈ (ಬಂಟವಾಳ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಬೇಗೂರು ಹೋಬಳಿ, ನಾಯನಪ್ಪತೆಟ್ಟಿ ಪಾಳ್ಯದ ಸರಹದ್ದಿನಲ್ಲಿರುವ ಸರ್ವೆ ನಂಬರುಗಳು ಮತ್ತು ಮೈಕೋ ನೌಕರರ ಗೃಹ ನಿರ್ಮಾಣ ಸಂಘಕ್ಕಾಗಿ ಎಷ್ಟು ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ?